ಅವನ್ನು ಭೌತಿಕ ಕ್ರಿಯೆಗಳಲ್ಲಿ ತೊಡಗಿಸಿದರೆ ಭೌತಿಕ ಅಭಿವೃದ್ಧಿಯಾಗುವುದು. ಚಿಂತನಾಕ್ಷೇತ್ರದಲ್ಲಿ ಸಕ್ರಿಯಗೊಳಿಸಿದರೆ ಬೌದ್ಧಿಕ ಅಭಿವೃದ್ಧಿ ಸಾಧ್ಯವಾಗುವುದು. ಆ ಚೈತನ್ಯಶಕ್ತಿಯನ್ನು ಸ್ವಂತ ಅದರ ಮೇಲೆಯೇ ಹರಿಸಿಕೊಂಡಾಗ ಮಾನವನು ದೇವನಾಗುವನು"

ಉಪನಿಷತ್ತುಗಳ ಸಂದೇಶ ಶಕ್ತಿಯ ಮತ್ತು ನಿರ್ಭಯತೆಯ ಸಂದೇಶ. ಅವುಗಳ ಪರಿಧಿಯೂ ವಿಶ್ವಾತ್ಮಕವಾಗಿದೆ. ಕಾರಣ ಅವುಗಳು ಒಬ್ಬ ಮಾನವನ ಅಂತರಾಳದ ಆಳಗಳನ್ನು ಶೋಧಿಸುತ್ತವೆಯೇ ಹೊರತು ಅವನ ಜಾತಿ, ದೇಶ,ಕುಲಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಉಪನಿಷತ್ತುಗಳು ಜೀವನದ ಯಾವುದೇ ನೆಲೆಯಲ್ಲಿರುವ ಸ್ತ್ರೀ ಅಥವಾ ಪುರುಷನಿಗೆ ಕರೆ ಕೊಡುವುದು ಇಷ್ಟು: "ಎದ್ದು ನಿಲ್ಲಿ, ನಿಮ್ಮ ದೈವೀ ಪರಂಪರೆಯ ಸಂಪತ್ತಿನ ಹಕ್ಕನ್ನು ಚಲಾಯಿಸಿ"

ಪ್ರಖ್ಯಾತ ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞ ಶೋಪನ್‌ಹೋವರ್ ಹೀಗೆ ಉದ್ಗರಿಸುತ್ತಾನೆ : "ಇಡೀ ಪ್ರಪಂಚದಲ್ಲಿ ಉಪನಿಷತ್ತುಗಳ ಅಧ್ಯಯನದಂತಹ ಅತ್ಯಂತ ಫಲದಾಯಕವೂ, ಉನ್ನತ ಸ್ಥಿತಿಗೆ ಏರಿಸಬಲ್ಲದ್ದೂ ಬೇರೊಂದಿಲ್ಲ. ಉಪನಿಷತ್ತುಗಳು ನನ್ನ ಬಾಳಿಗೆ ಸಾಂತ್ವನವನ್ನು ನೀಡಿವೆ, ನನ್ನ ಮರಣದಲ್ಲಿಯೂ ಅವು ಸಾಂತ್ವನವನ್ನು ನೀಡುತ್ತವೆ. "

> "ನಾನು ಉಪನಿಷತ್ತುಗಳನ್ನು ಮಾತ್ರ ಬೋಧಿಸುತ್ತೇನೆ. ನೀವು ಪರೀಕ್ಷಿಸಿದರೆ ಉಪನಿಷತ್ತಲ್ಲದೆ ನಾನು ಬೇರೇನನ್ನೂ ಹೇಳಿಲ್ಲ ಎಂದು ಗೊತ್ತಾಗುವುದು. ಉಪನಿಷತ್ತುಗಳಲ್ಲಿಯೂ ಒಂದು ಭಾವನೆಯನ್ನು ಮಾತ್ರ ಬೋಧಿಸಿರುವೆನು, ಅದೇ ಬಲ. ವೇದ ವೇದಾಂತಗಳ ಸಾರವೆಲ್ಲ ಆ ಒಂದು ಪದದಲ್ಲಿದೆ."
>
> – ಸ್ವಾಮಿ ವಿವೇಕಾನಂದರು

# ಪ್ರಹಸನ ಪ್ರಸಂಗ

ಒಬ್ಬ ಕಡು ಲೋಭಿ ವ್ಯಾಪಾರಿಯಿದ್ದ. ಗುರುಹಿರಿಯರು, ಅವನಿಗೆ ತನ್ನ ಹಣವನ್ನು ಬಡಬಗ್ಗರಿಗೆ ದಾನಧರ್ಮ ಮಾಡಿ ಪುಣ್ಯವನ್ನು ಸಂಪಾದಿಸಿಕೊಳ್ಳಲು ಹಿತವಚನ ಹೇಳುತ್ತಿದ್ದರು. ಬಹಳಷ್ಟು ಧನ, ಸಂಪತ್ತು ಇದ್ದರೂ ಇನ್ನಷ್ಟು ಹಣಕ್ಕಾಗಿ ಆಸೆ ಪಡುತ್ತಿದ್ದ ವ್ಯಾಪಾರಿ ಅವರ ಹಿತವಚನವನ್ನು ಕಿವಿಗೇ ಹಾಕಿಕೊಳ್ಳುತ್ತಿರಲಿಲ್ಲ. ಆ ವ್ಯಾಪಾರಿಗೆ ನಾಲ್ಕು ಗಂಡು ಮಕ್ಕಳಿದ್ದರು. ನಾರಾಯಣ, ಹರಿ, ಕೇಶವ ಮತ್ತು ಮಾಧವ ಎಂದು ಅವರಿಗೆಲ್ಲ ದೇವರ ಹೆಸರನ್ನಿಟ್ಟಿದ್ದ. ತನ್ನ ಕೊನೆಯ ಕ್ಷಣದಲ್ಲಿ ಆ ಮಕ್ಕಳ ಹೆಸರನ್ನು ನೆನೆದು ಪುಣ್ಯವನ್ನು ಸಂಪಾದಿಸಬಹುದು ಎಂಬುದು ಆ ವ್ಯಾಪಾರಿಯ ಲೆಕ್ಕಾಚಾರವಾಗಿತ್ತು.

ಆ ವ್ಯಾಪಾರಿಗೆ ವಯಸ್ಸಾಗಿ ಅಂತ್ಯಕಾಲ ಸಮೀಪಿಸುತ್ತಿದ್ದಂತೆ ಅವನು ಕೂಗುತ್ತಿರುವುದನ್ನು ಕೇಳಿ ನಾಲ್ಕೂ ಜನ ಮಕ್ಕಳು ಮಂಚದ ಬಳಿಗೆ ಓಡಿ ಬಂದರು. ಆ ವ್ಯಾಪಾರಿ ನಾಲ್ಕೂ ಜನರು ಬಂದದ್ದನ್ನು ಕಂಡು, "ಅಂಗಡಿಯಲ್ಲಿ ಯಾರಿದ್ದಾರೆ?" ಎನ್ನುತ್ತಾ ಪ್ರಾಣಬಿಟ್ಟನು.

❊ ❊ ❊ ❊

ಸತ್ಪಾತ್ರರಿಗೆ ಮಾತ್ರ ದಾನ ಮಾಡಬೇಕು ಎನ್ನುತ್ತಾರೆ ತಿಳಿದವರು. ವಸ್ತುಗಳ ದುರುಪಯೋಗಕ್ಕೆ ನಾವು ಅವಕಾಶ ಕೊಡಬಾರದು ಎಂಬುದು ಅವರ ಉದ್ದೇಶ!

ಒಂದು ದೊಡ್ಡ ನಗರದ ಕ್ಷೌರಿಕನ ಅಂಗಡಿಗೆ ಒಮ್ಮೆ ಒಬ್ಬ ಸಾಧು ಬಂದ. ಕ್ಷೌರದ ನಂತರ ಆ ಕ್ಷೌರಿಕನಿಗೆ ಕ್ಷೌರಕ್ಕೆ ತಗುಲಿದ ಖರ್ಚು ಎಷ್ಟು ಎಂದು ಕೇಳಿದ. ಆ ಕ್ಷೌರಿಕ ವಿನಯದಿಂದ ಹೇಳಿದ, "ಏನೂ ಬೇಕಿಲ್ಲ. ಭಗವಂತನಿಗೆ ಸೇವೆ ಮಾಡಿದೆ ಎಂದು ಭಾವಿಸುತ್ತೇನೆ." ಮಾರನೆಯ ದಿನ ಅಂಗಡಿಯ ಬಾಗಿಲಿಗೇ ಕೆಲವು ಪ್ರಾರ್ಥನೆಯ ಪುಸ್ತಕಗಳೂ ಹಾಗೂ ಆಶೀರ್ವಾದದ ಪ್ರಸಾದ ಬಂದು ತಲುಪಿತು. ಆ ಸಾಧು ಇವನ್ನೆಲ್ಲ ಕಳಿಸಿದ್ದರು.

ಮಧ್ಯಾಹ್ನದ ಹೊತ್ತಿಗೆ ಒಬ್ಬ ಪೊಲೀಸ್ ಪೇದೆ ಕ್ಷೌರದ ಅಂಗಡಿಗೆ ಬಂದು ಕೇಶವಿನ್ಯಾಸ ಮಾಡಿಸಿಕೊಂಡ. ಎಷ್ಟು ಹಣ ಕೊಡಬೇಕು ಎಂದು ಕೇಳಿದಾಗ ಆ ಕ್ಷೌರಿಕ ಹೇಳಿದ, "ಪರವಾಗಿಲ್ಲ, ಸಮಾಜಸೇವೆ ಮಾಡಿದೆ ಎಂದು ಭಾವಿಸುತ್ತೇನೆ." ಮಾರನೆಯ ದಿನ ಕೆಲಸಕ್ಕೆ ಬಂದಾಗ ಅಂಗಡಿಯ ಬಾಗಿಲಿಗೇ ಸಿಹಿತಿಂಡಿಗಳು ಮತ್ತು ಕೃತಜ್ಞತೆಯ ಪತ್ರವನ್ನು ಪೊಲೀಸ್ ಪೇದೆ ಕಳಿಸಿದ್ದನ್ನು ಕಂಡ.

ಸ್ವಲ್ಪ ಹೊತ್ತಿನ ನಂತರ ಒಬ್ಬ ಪುಢಾರಿ ಪ್ರವೇಶಿಸಿ ಕೇಶಾಲಂಕಾರ ಮಾಡಿಸಿಕೊಂಡ. ಅವನೂ ಕೂಡ ಹಣ ನೀಡಲು ಮುಂದಾದಾಗ ಕ್ಷೌರಿಕ, "ಪರವಾಗಿಲ್ಲ, ದೇಶಸೇವೆ ಮಾಡಿದ್ದೇನೆ ಎಂದು ಭಾವಿಸುತ್ತೇನೆ" ಎಂದ. ಮಾರನೆಯ ದಿನ ಕ್ಷೌರಿಕ ಕೆಲಸಕ್ಕೆ ಬಂದಾಗ ಅಂಗಡಿಯ ಬಾಗಿಲಲ್ಲಿ ಇವನು ಬರುವುದನ್ನೇ ಕಾಯುತ್ತ ಹನ್ನೆರಡು ಪುಢಾರಿಗಳು ಕುಳಿತಿದ್ದರು!

❊ ❊ ❊ ❊

ಶಿಷ್ಯ : ಹೇ ಗುರುವೇ! ನಿಮ್ಮಂತೆ ಪ್ರಸಿದ್ಧನಾಗಲು ನಾನು ಏನು ಮಾಡಬೇಕು?

ಗುರು : ದೊಡ್ಡದಾಗಿ ಗಡ್ಡವನ್ನು ಬೆಳೆಸಿಕೋ. ಯಾರಾದರೂ ಪ್ರಸಿದ್ಧ ಸಾಹಿತಿಗಳನ್ನು ಹಿಡಿದು ಪ್ರಖ್ಯಾತರಾಗಿರುವ ಸಂತರ ಜೀವನ ಚರಿತ್ರೆಗಳ ಸಂಗ್ರಹವನ್ನು ಪ್ರಕಟಿಸು. ಹ್ಞಾ! ಅದರಲ್ಲಿ ನಿನ್ನ ಆತ್ಮಕಥೆಯನ್ನು ಸೇರಿಸಲು ಮರೆಯಬೇಡ !